

بسم اللہِ الرّحمٰن الرّحیم

# ಹಝ್ರತ್ ಉಮರ್(ರ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **11–06–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

أَشْهَدُ أَنْ لَا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ಖುತ್‌ಬದಲ್ಲಿ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರಿಗೆ ಸಂಬಂಧಪಟ್ಟು ಹುದೈಬಿಯಾ ಸಂಧಿಯ ಪ್ರಸ್ತಾಪ ನಡೆಯುತ್ತಿತ್ತು. ಹುದೈಬಿಯಾ ಕರಾರಿಗೆ ವಿರುದ್ಧವಾಗಿ ಖುರೈಶಿಯರ ಸಹಾಯಕ ಗೋತ್ರವಾದ ಬನೂಬಕರ್ ಗೋತ್ರವು ಮುಸ್ಲಿಮರ ಸಹಾಯಕ ಗೋತ್ರವಾದ ಬನೂಖುಝಾಅದ ಮೇಲೆ ಹಲ್ಲೆ ನಡೆಸಿತು. ಖುರೈಶಿಗಳು ಬನೂಬಕರ್ ಗೋತ್ರಕ್ಕೆ ನೆರವು ಸಹ ನೀಡಿತು. ಆದ್ದರಿಂದ ಒಪ್ಪಂದವನ್ನು ನವೀಕರಿಸಲು ಅಬೂಸುಫ್‌ಯಾನ್ ಮದೀನಕ್ಕೆ ಬಂದರು. ಡಾಕ್ಟರ್ ಅಲಿ ಬಿನ್ ಸಲಾಬಿ ಬರೆಯುತ್ತಾರೆ: ಈ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ)ರ ಚಿಕ್ಕಪ್ಪ ಹಝ್ರತ್ ಅಬ್ಬಾಸ್(ರ) ಅಬೂಸುಫ್‌ಯಾನ್‌ರನ್ನು ಕರೆದುಕೊಂಡು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದರು. ಇಬ್ಬರೂ ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋಗುತ್ತಿರುವುದನ್ನು ಹಝ್ರತ್ ಉಮರ್(ರ) ಮಾರ್ಗ ಮಧ್ಯೆ ಕಂಡರು ಮತ್ತು ಅವರು ಸಹ ಅಲ್ಲಿಗೆ ತಲುಪಿದರು. ಅಲ್ಲಾಹನ ಶತ್ರುವಾದ ಅಬೂಸುಫ್‌ಯಾನಿನ ತಲೆಯನ್ನು ಕೊಯ್ಯಲು ಹಝ್ರತ್ ಪೈಗಂಬರ್(ಸ)ರೊಡನೆ ಹಝ್ರತ್ ಉಮರ್(ರ) ಅನುಮತಿ ಕೇಳಿದರು. ಆಗ ಹಝ್ರತ್ ಅಬ್ಬಾಸ್(ರ) ಹೇಳಿದರು: ಯಾ ರಸೂಲಲ್ಲಾಹ್, ನಾನು ಅಬೂಸುಫ್‌ಯಾನಿಗೆ ಅಭಯವನ್ನು ನೀಡಿದ್ದೇನೆ. ಹಝ್ರತ್ ಉಮರ್(ರ) ಮತ್ತು ಹಝ್ರತ್ ಅಬ್ಬಾಸ್‌ರ ನಡುವೆ ಮಾತುಕತೆ ನಡೆಯಿತು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಬ್ಬಾಸ್, ಅಬೂಸುಫ್‌ಯಾನ್‌ರನ್ನು ನಿನ್ನೊಂದಿಗೆ ಕೊಂಡುಹೋಗಿ ನಾಳೆ ಕರೆದುಕೊಂಡು ಬಾ.

ಶಅಬಾನ್ ಹಿಜರಿ 7ರಲ್ಲಿ ಹಝ್ರತ್ ಉಮರ್(ರ)ರನ್ನು ಒಂದು ದಂಡಯಾತ್ರೆಗಾಗಿ 30 ಜನರೊಂದಿಗೆ ಹವಾಝುನ್ ಗೋತ್ರದ ಶಾಖೆಯಾದ ತರ್ಬದ ಕಡೆಗೆ ಹಝ್ರತ್ ಪೈಗಂಬರ್(ಸ) ಕಳುಹಿಸಿದರು.

ಚರಿತ್ರೆಯ ಗ್ರಂಥಗಳಲ್ಲಿ, ಮೊತ್ತಮೊದಲಾಗಿ ಖೈಬರ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರ ಧ್ವಜದ ಪ್ರಸ್ತಾಪ ಬರುತ್ತದೆ. ಅದಕ್ಕೆ ಮುಂಚೆ ಸಣ್ಣ ಬಾವುಟಗಳು ಮಾತ್ರವಿರುತ್ತಿದ್ದುವು. ಹಝ್ರತ್ ಪೈಗಂಬರ್(ಸ)ರ ಉಖಾಬ್ ಎಂಬ ಹೆಸರಿನ ಈ ಧ್ವಜ ಕಪ್ಪು ಬಣ್ಣದ್ದಾಗಿತ್ತು. ಅದನ್ನು ಉಮ್ಮುಲ್ ಮುಅ್‌ಮಿನೀನ್ ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹರ ಚಾದರದಿಂದ ತಯಾರಿಸಲಾಗಿತ್ತು. ಹಝ್ರತ್ ಪೈಗಂಬರ್(ಸ) ಖೈಬರ್‌ನಲ್ಲಿ ತಂಗಿದ್ದಾಗ ತೀವ್ರವಾದ ತಲೆನೋವಿನ ಕಾರಣದಿಂದ ಅವರಿಗೆ ಹೊರಗೆ ಬರಲಾಗಲಿಲ್ಲ. ಈ ಸ್ಥಿತಿಯಲ್ಲಿ ಹಝ್ರತ್ ಪೈಗಂಬರ್(ಸ) ತನ್ನ ಧ್ವಜವನ್ನು ಹಝ್ರತ್ ಅಬೂಬಕರ್‌ರಿಗೆ, ಅನಂತರ ಹಝ್ರತ್ ಉಮರ್‌ರಿಗೆ ಮತ್ತೆ ಹಝ್ರತ್ ಅಲಿಗೆ ನೀಡಿದರು. ಅವರ ಕೈಗಳಿಂದ ಅಲ್ಲಾಹನು ವಿಜಯವನ್ನು ಪ್ರದಾನ ಮಾಡಿದನು.

ಖೈಬರ್ ವಿಜಯದ ನಂತರ ಲಭಿಸಿದ ಯುದ್ಧ ಸಂಪತ್ತಿನಲ್ಲಿ ಐದನೇ ಒಂದು ಭಾಗ ಹಝ್ರತ್ ಪೈಗಂಬರ್(ಸ)ರದ್ದಾಗಿತ್ತು. ಅದನ್ನು ಅವರು ಮುಸ್ಲಿಮರಿಗೆ ವಿತರಣೆ ಮಾಡಿದರು. ದೇಶವನ್ನು ತೊರೆಯಲು ತಯಾರಾಗಿ ಕೋಟೆಗಳಿಂದ ಇಳಿದುಬಂದಿದ್ದ ಯಹೂದಿಯರಿಗೆ ಅವರ ಸಂಪತ್ತನ್ನು, ಅದರಿಂದ ಲಭಿಸುವ ಲಾಭವನ್ನು ಅವರ ಮತ್ತು ಮುಸ್ಲಿಮರ ನಡುವೆ ವಿತರಣೆ ಮಾಡಲಾಗುವುದು ಎಂಬ ಶರತ್ತಿನೊಂದಿಗೆ ಹಝ್ರತ್ ಪೈಗಂಬರ್(ಸ) ಬಿಟ್ಟುಕೊಟ್ಟರು. ಹಝ್ರತ್ ಪೈಗಂಬರ್(ಸ)ರ ನಂತರ ಹಝ್ರತ್ ಅಬೂಬಕರ್‌ರ ಖಿಲಾಫತ್ ಕಾಲದಲ್ಲೂ ಇದೇ ರೀತಿ ಜಾರಿಯಲ್ಲಿತ್ತು. ಅರೇಬಿಯಾ ಭೂಖಂಡದಲ್ಲಿ ಎರಡು ಧರ್ಮಗಳು ಒಟ್ಟಿಗೆ ಇರಲಾರವು ಎಂದು ಹಝ್ರತ್ ಪೈಗಂಬರ್(ಸ) ತನ್ನ ಜೀವಿತದ ಕೊನೆಯ ರೋಗಾವಸ್ಥೆಯ ವೇಳೆ ಹೇಳಿದ್ದಾಗಿ ಹಝ್ರತ್ ಉಮರ್‌ರಿಗೆ ಅವರ ಖಿಲಾಫತ್ ಕಾಲದಲ್ಲಿ ಗೊತ್ತಾದಾಗ, ಅವರು ಹಝ್ರತ್ ಪೈಗಂಬರ್(ಸ)ರೊಂದಿಗೆ ಯಾವುದೇ ಒಪ್ಪಂದ ಮಾಡಿರದ ಎಲ್ಲ ಯಹೂದಿಯರನ್ನು ದೇಶದಿಂದ ಹೊರಗೆ ಹಾಕಿದರು.

ಹಝ್ರತ್ ಉಮರ್(ರ) ಜಾಹಿಲಿಯಾ ಕಾಲದಲ್ಲಿ ಹರಕೆ ಮಾಡಿದ ಒಂದು ಇಅ್‌ತಿಕಾಫ್ ಕುರಿತು ಹುನೈನ್ ಯುದ್ಧದಿಂದ ಮರಳಿಬರುವಾಗ ಹಝ್ರತ್ ಪೈಗಂಬರ್(ಸ)ರೊಡನೆ ಕೇಳಿದರು. ಆ ಹರಕೆಯನ್ನು ಈಡೇರಿಸಲು ಹಝ್ರತ್ ಪೈಗಂಬರ್(ಸ) ನಿರ್ದೇಶಿಸಿದರು.

ತಬೂಕ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಧನತ್ಯಾಗಕ್ಕಾಗಿ ಮನವಿ ಮಾಡಿದರು. ಇಂದು ನಾನು ಅಬೂಬಕರ್‌ಗಿಂತ ಮುಂದೆ ಆಗುವೆನು ಎಂದು ಹಝ್ರತ್ ಉಮರ್(ರ) ಯೋಚಿಸಿಕೊಂಡು ತನ್ನ ಬಳಿಯಲ್ಲಿದ್ದ ಸಂಪತ್ತಿನ ಅರ್ಧ ಭಾಗವನ್ನು ತೆಗೆದುಕೊಂಡು ಹೋದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅಂದು ಇಸ್ಲಾಮಿಗೆ ಅತ್ಯಂತ ಆಪತ್ಕಾಲವಾಗಿತ್ತು. ಆದರೆ ಹಝ್ರತ್ ಅಬೂಬಕರ್(ರ) ತನ್ನ ಸಂಪೂರ್ಣ ಸಂಪತ್ತನ್ನು ತೆಗೆದುಕೊಂಡು ಹಝ್ರತ್ ಪೈಗಂಬರ್(ಸ)ರಿಗೆ ಸಮರ್ಪಿಸಿದರು.

ಹಝ಼್ರತ್ ಮಸೀಹ್ ಮೌಊದ್(ಅ) ಈ ಘಟನೆಯನ್ನು ವಿವರಿಸುತ್ತಾ ಹೇಳುತ್ತಾರೆ: ಕೆಲವರು ಬೈಅತ್ ಮಾಡುತ್ತಾರೆ ಮತ್ತು ಧರ್ಮಕ್ಕೆ ಲೌಕಿಕತೆಯ ಮೇಲೆ ಆದ್ಯತೆ ನೀಡುತ್ತೇವೆ ಎಂದೂ ಕರಾರು ಮಾಡಿರುತ್ತಾರೆ. ಆದರೆ ನೆರವು ಮತ್ತು ಸಹಾಯದ ಆವಶ್ಯಕತೆಯಿರುವ ಸಂದರ್ಭದಲ್ಲಿ ಖರ್ಚು ಮಾಡದೇ ತಮ್ಮ ಜೇಬುಗಳನ್ನು ಅದುಮಿ ಹಿಡಿಯುತ್ತಾರೆ. ಇಂತಹ ಲೌಕಿಕ ಪ್ರೇಮದಿಂದ ಧಾರ್ಮಿಕ ಉದ್ದೇಶ ಗಳಿಸಲು ಸಾಧ್ಯವೇ?

ಹಝ಼್ರತ್ ಪೈಗಂಬರ್(ಸ) ಕಠಿಣವಾಗಿ ರೋಗಗ್ರಸ್ತರಾದಾಗ ಅವರು ಹೇಳಿದರು: ಬರೆಯಲು ಬೇಕಾಗಿರುವ ಸಾಮಗ್ರಿಗಳನ್ನು ತನ್ನಿರಿ. ನೀವು ಸನ್ಮಾರ್ಗದಿಂದ ದುರ್ಮಾರ್ಗಕ್ಕೆ ಹೋಗದಿರಲಿಕ್ಕಾಗಿ ನಿಮಗೆ ಒಂದು ಲಿಖಿತವನ್ನು ನಾನು ಬರೆದು ಕೊಡುವೆನು. ಹಝ಼್ರತ್ ಸಯ್ಯದ್ ಝೈನುಲ್ ಆಬಿದೀನ್ ವಲಿಯುಲ್ಲಾಹ್ ಶಾಹ್ ಸಾಹಿಬ್(ರ) ಬರೆಯುತ್ತಾರೆ: ಹಝ಼್ರತ್ ಪೈಗಂಬರ್(ಸ) ನಿಧನರಾಗುವರು ಎಂದು ಹಝ಼್ರತ್ ಉಮರ್(ರ) ಊಹಿಸಿಯೂ ಇರಲಿಲ್ಲ. ಹೀಗಾಗಿ ಅವರು ಜನರೊಡನೆ ಹೇಳಿದರು: ನಮ್ಮ ಬಳಿ ಪವಿತ್ರ ಖುರ್‌ಆನ್ ಇದೆ. ಅದು ನಮಗೆ ಸಾಕು. ಆದ್ದರಿಂದ ಹಝ಼್ರತ್ ಪೈಗಂಬರ್(ಸ)ರಿಗೆ ತೊಂದರೆ ಕೊಡುವ ಆವಶ್ಯಕತೆಯಿಲ್ಲ. ಆಗ ಅಲ್ಲಿದ್ದ ಜನರಲ್ಲಿ ಭಿನ್ನಾಭಿಪ್ರಾಯವುಂಟಾಯಿತು. ಎಷ್ಟು ಗದ್ದಲವೆದ್ದಿತ್ತು ಎಂದರೆ ಹಝ಼್ರತ್ ಪೈಗಂಬರ್(ಸ) ಹೇಳಿದರು: ಇಲ್ಲಿಂದ ಎದ್ದು ಹೊರಟು ಹೋಗಿರಿ. ಈ ನೋವಿನ ಸ್ಥಿತಿಯಲ್ಲೂ ಹಝ಼್ರತ್ ಪೈಗಂಬರ್(ಸ)ರಿಗೆ ಪವಿತ್ರ ಖುರ್‌ಆನಿನ ಮೇಲೆ ಎಷ್ಟು ಗೌರವವಿತ್ತು ಎಂದರೆ, ಹಝ಼್ರತ್ ಉಮರ್‌ರ ಮಾತು ಆಲಿಸಿದ ನಂತರ ಲಿಖಿತವನ್ನು ಬರೆದು ಕೊಡುವ ಉದ್ದೇಶವನ್ನೇ ಉಪೇಕ್ಷಿಸಿದರು. ಈ ಘಟನೆಯ ನಂತರ ಸಹ ಕೆಲವು ದಿನಗಳ ಕಾಲ ಹಝ಼್ರತ್ ಪೈಗಂಬರ್(ಸ) ಜೀವಂತವಾಗಿದ್ದರು. ಆ ದಿನಗಳಲ್ಲಿ ಬೇರೆ ಕೆಲವು ವಸಿಯ್ಯತ್‌ಗಳನ್ನೂ ಹಝ಼್ರತ್ ಪೈಗಂಬರ್(ಸ) ಮಾಡಿದರು. ಆದರೆ ಆ ಲಿಖಿತದ ಬಗ್ಗೆ ಏನೂ ಹೇಳಿರಲಿಲ್ಲ.

ಹಝ಼್ರತ್ ಪೈಗಂಬರ್(ಸ) ನಿಧನರಾದಾಗ ಹಝ಼್ರತ್ ಉಮರ್ ನಿಂತುಕೊಂಡು ಹೇಳಿದರು: ಅಲ್ಲಾಹನಾಣೆ, ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮೃತಪಟ್ಟಿಲ್ಲ. ಹಝ಼್ರತ್ ಪೈಗಂಬರ್(ಸ) ನಿಧನರಾಗಿರುವರು ಎಂದು ಹೇಳುವವನನ್ನು ನಾನು ನನ್ನ ಖಡ್ಗದಿಂದ ಕೊಲ್ಲುವೆನು. ಕೆಲವು ಜನರ ಕೈಕಾಲುಗಳನ್ನು ಕಡಿಯಲು ಅಲ್ಲಾಹನು ಖಂಡಿತ ಅವರನ್ನು ಎಬ್ಬಿಸುವನು. ಹಝ಼್ರತ್ ಪೈಗಂಬರ್(ಸ)ರ ನಿಧನದ ವೇಳೆ ಹಝ಼್ರತ್ ಅಬೂಬಕರ್(ರ) ಎರಡು ಮೈಲುಗಳಷ್ಟು ದೂರದಲ್ಲಿರುವ ಸನಾ ಎಂಬ ಸ್ಥಳದಲ್ಲಿ ಇದ್ದರು. ಹಝ಼್ರತ್ ಉಮರ್(ರ)ರ ಈ ಭಾಷಣದ ವೇಳೆ ಅವರು ಅಲ್ಲಿಗೆ ತಲುಪಿದರು. ಹಝ಼್ರತ್ ಪೈಗಂಬರ್(ಸ)ರ ಅನುಗ್ರಹೀತ ಮುಖದಿಂದ ಬಟ್ಟೆಯನ್ನು ಸರಿಸಿಕೊಂಡು ಹಝ಼್ರತ್ ಪೈಗಂಬರ್(ಸ)ರ ಮುಖವನ್ನು ಹಝ಼್ರತ್ ಅಬೂಬಕರ್(ರ) ಚುಂಬಿಸಿದರು. ಅನಂತರ ಹೊರಗೆ ಬಂದರು ಮತ್ತು ಜನರನ್ನು ಸಂಬೋಧಿಸಿ ಭಾಷಣ ಮಾಡಿದರು. ಅಲ್ಲಾಹನಿಗೆ ಸ್ತುತಿಸ್ತೋತ್ರಗಳನ್ನು ಅರ್ಪಿಸಿದ ನಂತರ ಹಝ಼್ರತ್ ಅಬೂಬಕರ್(ರ) ಹೇಳಿದರು: ನೋಡಿರಿ, ಯಾರು ಮುಹಮ್ಮದ್(ಸ)ರನ್ನು ಪೂಜಿಸುತ್ತಿದ್ದರೋ ಅವರು ಕೇಳಿರಿ, ಮುಹಮ್ಮದ್(ಸ) ನಿಧನರಾಗಿರುವರು. ಯಾರು ಅಲ್ಲಾಹನನ್ನು ಪೂಜಿಸುತ್ತಾರೋ ಅವರು ನೆನಪಿಡಲಿ, ಅಲ್ಲಾಹನು ಜೀವಂತನು ಅವನು ಎಂದಿಗೂ ಸಾಯುವುದಿಲ್ಲ. ಅನಂತರ ಹಝ಼್ರತ್ ಅಬೂಬಕರ್(ರ) ಈ ವಚನವನ್ನು ಓದಿದರು: **ವಮಾ ಮುಹಮ್ಮದುನ್ ಇಲ್ಲಾ ರಸೂಲ್. ಖದ್ ಖ಼ಲತ್ ಮಿನ್‌ಖಬ್‌ಲಿಹಿರ್‍ರುಸುಲ್....** ಎಂದರೆ, **"**ಮುಹಮ್ಮದ್(ಸ) ಕೇವಲ ಅಲ್ಲಾಹನ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲ ಪ್ರವಾದಿಗಳೂ ಗತಿಸಿದ್ದಾರೆ. ಒಂದು ವೇಳೆ ಪೈಗಂಬರ್(ಸ) ಮೃತಪಟ್ಟರೆ ಅಥವಾ ಕೊಲ್ಲಲ್ಪಟ್ಟರೆ ನೀವು ಹಿಂತಿರುಗಿ ಹೋಗುವಿರಾ? ಹಿಂತಿರುಗಿ ಹೋಗುವವನು ಅಲ್ಲಾಹನಿಗೆ ಏನೂ ಹಾನಿಯುಂಟು ಮಾಡಲಾರ. ಕೃತಜ್ಞತೆ ಸೂಚಿಸುವವರಿಗೆ ಅಲ್ಲಾಹನು ಖಂಡಿತವಾಗಿಯೂ ಪ್ರತಿಫಲ ನೀಡುತ್ತಾನೆ.**"** ಈ ವಚನವನ್ನು ಆಲಿಸಿಕೊಂಡು ಜನರು ಬಿಕ್ಕಿ ಬಿಕ್ಕಿ ಅತ್ತರು. ಹಝ಼್ರತ್ ಉಮರ್(ರ) ಹೇಳುತ್ತಾರೆ: ಅಲ್ಲಾಹನಾಣೆ, ಅಬೂಬಕರ್(ರ) ಈ ವಚನ ಓದುವುದನ್ನು ನಾನು ಆಲಿಸಿದಾಗ, ನಾನು ಎಷ್ಟು ಹೆದರಿದೆನು ಎಂದರೆ, ಭಯದಿಂದ ನನ್ನ ಕಾಲುಗಳು ನಡುಗಿದುವು ಮತ್ತು ನಾನು ನೆಲಕ್ಕೆ ಬಿದ್ದುಬಿಟ್ಟೆನು. ಈ ವಚನವನ್ನೂ ಅಲ್ಲಾಹನು ಅವತೀರ್ಣಗೊಳಿಸಿದ್ದನು ಎಂದು ಜನರಿಗೆ ಗೊತ್ತೇ ಇರಲಿಲ್ಲವೆಂಬಂತೆ ಇತ್ತು ಎಂದು ವರದಿಗಾರ ಹೇಳಿದ್ದನ್ನು ಹಝ಼್ರತ್ ಮಸೀಹ್ ಮೌಊದ್(ಅ) ಉಲ್ಲೇಖಿಸಿದ್ದಾರೆ. ಹಝ಼್ರತ್ ಉಮರ್(ರ) ಹೇಳಿದರು: ಅಲ್ಲಾಹನಾಣೆ, ನಾನು ಈ ವಚನವನ್ನು ಅಬೂಬಕರ್‌ರಿಂದಲೇ ಆಲಿಸಿದೆ.

ಹಝ಼್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈಗ ಯೋಚಿಸಿರಿ, ಎಲ್ಲ ಪ್ರವಾದಿಗಳು ಮರಣಹೊಂದಿರುವರು ಎಂಬ ಸ್ಪಷ್ಟ ಮತ್ತು ಖಚಿತ ಪುರಾವೆಯನ್ನು ಹಝ಼್ರತ್ ಅಬೂಬಕರ್(ರ) ಓದಿ ಹೇಳಿದ್ದು ಪವಿತ್ರ ಖುರ್‌ಆನಿನಿಂದ ಅಲ್ಲವೆಂದಾದರೆ, ಒಂದು ಲಕ್ಷಕ್ಕಿಂತಲೂ ಹೆಚ್ಚು ಸಂಖ್ಯೆಯಲ್ಲಿ ಅಲ್ಲಿದ್ದ ಸಹಾಬರು ಕೇವಲ ಊಹೆ ಮತ್ತು ಸಂಶಯಾಸ್ಪದ ಸಂಗತಿಯನ್ನು ಏಕೆ ಸಮ್ಮತಿಸಿದರು? ಹೇ ಅಬೂಬಕರ್, ನಿಮ್ಮ ಪುರಾವೆ ಅಪೂರ್ಣವೆಂದೂ, ಹಝ಼್ರತ್ ಈಸಾ(ಅ) ಶರೀರ ಸಮೇತ ಆಕಾಶಕ್ಕೆ ಹೋಗಿರುವ ಬಗ್ಗೆ ಪವಿತ್ರ ಖುರ್‌ಆನಿನ **ರಾಫಿಉಕ ಇಲಯ್ಯ** ಎಂಬ ಆಯತ್ ಸೂಚನೆ ನೀಡುತ್ತದೆ ಎಂದು ನಿಮಗೆ ಗೊತ್ತಿಲ್ಲವೇ ಎಂದೂ ಮತ್ತು **ಬಲ್‌ರಫಅಹುಲ್ಲಾಹು ಇಲೈಹಿ** ಎಂದು ಅಲ್ಲಾಹನು ಹೇಳಿದ್ದು ನೀವು ಕೇಳಿಲ್ಲವೇ? ಹೀಗಿರುವಾಗ ಹಝ಼್ರತ್ ಪೈಗಂಬರ್(ಸ) ಆಕಾಶಕ್ಕೆ ಹೋಗಿರುವುದನ್ನು ನೀವೇಕೆ ನಂಬುವುದಿಲ್ಲ ಎಂದೂ ಸಹಾಬರು ಏಕೆ ಪ್ರಶ್ನಿಸಲಿಲ್ಲ. ಸತ್ಯದಲ್ಲಿ, ಸಹಾಬರಿಗೆ ಪವಿತ್ರ ಖುರ್‌ಆನಿನ ಶೈಲಿ ಗೊತ್ತಿತ್ತು. ಹಝ಼್ರತ್ ಅಬೂಬಕರ್ ಓದಿದ ಈ ವಚನವನ್ನು ಆಲಿಸಿಕೊಂಡು ಮತ್ತು **ಖ಼ಲತ್** ಎಂಬ ಪದದ ವ್ಯಾಖ್ಯಾನವನ್ನು **ಅಫಇಮ್ಮಾತ ಔ ಖುತಿಲ** ಎಂಬ ವಾಕ್ಯದಲ್ಲಿ ಮನವರಿಕೆ ಮಾಡಿಕೊಂಡ ಸಹಾಬರು ತಕ್ಷಣವೇ ಹಝ಼್ರತ್ ಪೈಗಂಬರ್(ಸ)ರ ಮರಣದ ಕಾರಣದಿಂದ ತೀವ್ರವಾಗಿ ದುಃಖಿತರಾದರು. ಹಿಂದಿನ ಎಲ್ಲ ಪ್ರವಾದಿಗಳು ಮೃತಪಟ್ಟಿರುವರು ಎಂದು ಅವರಿಗೆ ಗೊತ್ತಾಯಿತು.

ಮತ್ತೊಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನು ಸಾವಿರಾರು ಉತ್ತಮ ಪ್ರತಿಫಲಗಳನ್ನು ಹಝ್ರತ್ ಅಬೂಬಕರ್(ರ)ರಿಗೆ ದಯಪಾಲಿಸಲಿ. ಅವರು ಬೇಗನೇ ಈ ಫಿತ್ನವನ್ನು ಹೋಗಲಾಡಿಸಿದರು. ಪವಿತ್ರ ಖುರ್‌ಆನಿನಿಂದ ಪುರಾವೆಯನ್ನು ಮುಂದಿರಿಸಿಕೊಂಡು, ಹಿಂದಿನ ಪ್ರವಾದಿಗಳು ಮೃತಪಟ್ಟಿರುವವರು ಎಂದು ಹೇಳಿದರು. **ಖ಼ಲತ್** ಎಂಬ ಪದಕ್ಕೆ ಕೆಲವು ಪ್ರವಾದಿಗಳು ಆಕಾಶದಲ್ಲಿ ಕುಳಿತುಕೊಂಡಿರುವವರು ಎಂಬ ಅರ್ಥವನ್ನು ಇಲ್ಲಿ ಕೊಡುವುದಾದರೆ, ಹಝ್ರತ್ ಉಮರ್(ರ) ಹೇಳಿದ್ದು ಸರಿಯೆಂದು ಹೇಳಬಹುದಾಗಿತ್ತು. ಅವರ ನಿಲುವಿಗೆ ಈ ವಚನ ಸಹಾಯಕವಾಗುತ್ತಿತ್ತು. ಆದರೆ **ಖ಼ಲತ್** ಎಂಬ ಪದ ಎರಡು ವಿಧಗಳಲ್ಲಿ ಗತಿಸಿ ಹೋಗುವುದನ್ನು ಮಾತ್ರ ಸೂಚಿಸುತ್ತದೆ. ಒಂದು ಸಾಮಾನ್ಯ ಮರಣ ಮತ್ತೊಂದು ಹತ್ಯೆಗೀಡಾಗುವುದು.

ಹಝ್ರತ್ ಅಬೂಬಕರ್‌ರನ್ನು ಖ಼ಲೀಫರನ್ನಾಗಿ ಆಯ್ಕೆ ಮಾಡಲಾಗುವ ಸಂದರ್ಭದಲ್ಲಿ, ಅನ್ಸಾರ್‌ಗಳು ಬನೀ ಸಾಅದದ ಮನೆಯಲ್ಲಿ ಹಝ್ರತ್ ಸಅದ್ ಬಿನ್ ಉಬಾದರ ಬಳಿ ಒಟ್ಟುಗೂಡಿಕೊಂಡು ಹೀಗೆ ಹೇಳಿದರು: ಒಬ್ಬ ಅಮೀರ್ ನಿಮ್ಮಿಂದ ಮತ್ತು ಒಬ್ಬ ಅಮೀರ್ ನಮ್ಮಿಂದ ಆಗಬೇಕು. ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ) ಮತ್ತು ಹಝ್ರತ್ ಅಬೂಉಬೈದ ಬಿನ್ ಜರಾಹ್(ರ) ಅವರ ಬಳಿಗೆ ಹೋದರು. ವೈಭವಶಾಲಿಯಾದ ಒಂದು ಭಾಷಣವನ್ನು ಮಾಡುತ್ತಾ ಹಝ್ರತ್ ಅಬೂಬಕರ್(ರ) ಹೇಳಿದರು: ನಾವು ಅಮೀರ್ ಆಗಿರುವೆವು ಮತ್ತು ನೀವು ಮಂತ್ರಿಗಳಾಗಿರುವಿರಿ. ಏಕೆಂದರೆ, ಖುರೈಶಿಗಳು ವಂಶೀಯ ಪರವಾಗಿ ಅರೇಬಿಯರಲ್ಲಿ ಅತ್ಯಂತ ಶ್ರೇಷ್ಠರು ಮತ್ತು ಖುರೈಶ್ ಎಲ್ಲರಿಗಿಂತ ಹಳೆಯ ಗೋತ್ರವಾಗಿದೆ. ಆದ್ದರಿಂದ ಉಮರ್ ಅಥವಾ ಅಬೂಉಬೈದರನ್ನು ಬೈಅತ್ ಮಾಡಿರಿ. ಆಗ ಹಝ್ರತ್ ಉಮರ್(ರ) ಹೇಳಿದರು: ಇಲ್ಲ, ನಾವಂತು ನಿಮಗೆ, ಎಂದರೆ ಅಬೂಬಕರರ ಕೈಯಲ್ಲಿ ಬೈಅತ್ ಮಾಡುವೆವು. ಏಕೆಂದರೆ, ನೀವು ನಮ್ಮ ನೇತಾರ, ನಮ್ಮೆಲ್ಲರಿಗಿಂತ ಉತ್ತಮ ಮತ್ತು ಹಝ್ರತ್ ಪೈಗಂಬರ್(ಸ)ರಿಗೆ ಅತ್ಯಂತ ಪ್ರಿಯರಾಗಿದ್ದರು. ಹೀಗೆ ಹೇಳುತ್ತಾ ಹಝ್ರತ್ ಉಮರ್(ರ) ಅಬೂಬಕರ್(ರ)ರ ಕೈಯನ್ನು ಹಿಡಿದುಕೊಂಡು ಬೈಅತ್ ಮಾಡಿದರು.

ಹಝ್ರತ್ ಅಬೂಬಕರ್(ರ)ರ ಖ಼ಿಲಾಫತ್ ಕಾಲದಲ್ಲಿ ಧರ್ಮತ್ಯಾಗಿಗಳು ತಲೆಯೆತ್ತಿದ್ದರು. ಅವರ ವಿರುದ್ಧ ಯುದ್ಧ ಮಾಡುವುದನ್ನು ಮೊದಲು ಹಝ್ರತ್ ಉಮರ್(ರ) ವಿರೋಧಿಸಿದರು. ಆದರೆ ಹಝ್ರತ್ ಅಬೂಬಕರರ ತೀರ್ಮಾನದ ಮುಂದೆ ಅವರು ತಲೆಯನ್ನು ಬಾಗಿಸಿದರು. ಹಝ್ರತ್ ಉಮರ್(ರ) ಹೇಳುತ್ತಾರೆ: ಯುದ್ಧ ಮಾಡಲಿಕ್ಕಾಗಿ ಹಝ್ರತ್ ಅಬೂಬಕರ್‌ರ ಹೃದಯವನ್ನು ಅಲ್ಲಾಹನು ತಯಾರು ಮಾಡಿದ್ದಾನೆ ಎಂದು ನಾನು ಕಂಡಾಗ, ಇದೇ ಸರಿಯೆಂದು ನನಗೆ ಮನವರಿಕೆಯಾಯಿತು.

ಯಮಾಮ ಯುದ್ಧದಲ್ಲಿ ಪವಿತ್ರ ಖುರ್‌ಆನ್ ಕಂಠಪಾಠಮಾಡಿದ್ದ ಎಪ್ಪತ್ತು ಹಾಫಿಝ್‌ಗಳು ಹುತಾತ್ಮರಾದಾಗ, ಪವಿತ್ರ ಖುರ್‌ಆನನ್ನು ಸಂಕಲಿಸಲು ಹಝ್ರತ್ ಉಮರ್(ರ) ಹಝ್ರತ್ ಅಬೂಬಕರ್(ರ)ರಿಗೆ ಸಲಹೆ ನೀಡಿದ್ದರು.

(ಇದರ ಬಗ್ಗೆ ಪ್ರಸ್ತಾಪ ಮುಂದುವರೆಯುವುದು ಎಂದು ಹಝ್ರತ್ ಖ಼ಲೀಫತುಲ್ ಮಸೀಹ್ ಖುತ್‌ಬದ ಕೊನೆಯಲ್ಲಿ ಹೇಳಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ـ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, On 11-06-2021*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon